ಅ) ಕಾನ್ ಮತ್ತು ಕುಮ್ಕಿ ಜಮೀನುಗಳಲ್ಲಿ ಆಗಿರುವ ಒತ್ತುವರಿಯ ಸಕ್ರಮೀಕರಣ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಈಚಲುವನ ಮತ್ತು ಅಮೃತಮಹಲ್ ಕಾವಲು ಭೂಮಿಯ ಅನಧಿಕೃತ ಸಾಗುವಳಿ

2022 - ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಚಲುವನ ಮತ್ತು ಅಮೃತ ಮಹಲ್ ಕಾವಲು ಭೂಮಿಗಳನ್ನು ಅನಧಿಕೃತವಾಗಿ ಸಾಗುವಳಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಒಟ್ಟು ಏಕರೆ ಎಷ್ಟು; ಪಾರಂ ನಂ. 50ರಲ್ಲಿ ಆರ್ಜಿ ಬಂದಿರುವ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಅನಧಿಕೃತ ಸಾಗುವಳಿ ಈಚಲುವನ ಮತ್ತು ಅಮೃತಮಹಲ್ ಕಾವಲು ಭೂಮಿಯನ್ನು ಸಕ್ರಮ ಮಾಡಲು ಕಾನೂನಿನಡಿಯಲ್ಲಿ ಅವಕಾಶವಿದೆಯೇ; ಇದ್ದಲ್ಲಿ ಅನುಸರಿಸಲು ಇರುವ ಮಾರ್ಗ ಯಾವುವು;

ಇ) ಕಾನೂನಿನಲ್ಲಿ ಅವಕಾಶವಿಲ್ಲದಿದ್ದಲ್ಲಿ ಅವಕಾಶ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು, ಈಚಲುವನ ಮತ್ತು ಅಮೃತಮಹಲ್ ಕಾವಲು ಹಾಗೂ ಇತರೆ ವರ್ಗದ ಸರ್ಕಾರದ ಜಮೀನು ಸೇರಿ ಒಟ್ಟು 25,80,214 ಏಕರೆಗಳು ಒತ್ತುವರಿಯಾಗಿರುತ್ತದೆ. ಫಾರಂ ನಂ.೫೦ ರಲ್ಲಿ ಒಟ್ಟು 10,86,826 ಅರ್ಜಿಗಳು ಸ್ವೀಕೃತಿಯಾಗಿರುತ್ತವೆ. (ಈಚಲುವನ ಮತ್ತು ಅಮೃತ ಮಹಲ್ ಕಾವಲ್ ಬಗ್ಗೆ ಪ್ರತ್ಯೇಕ ಮಾಹಿತಿ ಲಭ್ಯವಿಲ್ಲ.- ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಒದಗಿಸಿದೆ).

ಆ) ಇಲ್ಲ. ಉದ್ಭವಿಸುವುದಿಲ್ಲ.

ಇ) ಈಚಲುವನದಲ್ಲಿ ಆಗಿರುವ ಒತ್ತುವರಿಯ ಸಕ್ರಮೀಕರಣದ ವಿಚಾರವು ಪರಿಶೀಲನೆಯಲ್ಲಿದೆ.